**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ :: 78/2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಕಾರ್ತಿಕ್.ಸಿ | **PW**-03 |
| **ತಂದೆಯ ಹೆಸರು** | : | ಚಂದ್ರಮೋಹನ್ | **CW**-10 |
| **ವಯಸ್ಸು** | : | 32 | |
| **ಉದ್ಯೋಗ** | : | ಟೆಲಿಕಾಂ ಟೆಕ್ನಿಶಿಯನ್ | |
| **ವಾಸಸ್ಥಳ** | : | ಕಾಂಚೀನಗರ. | |

**ದಿನಾಂಕಃ20-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

ದಿಃ16-11-2024 ರಂದು ಮಧ್ಯಾಹ್ನ 1.45 ರಿಂದ 2.45ರ ವರೆವಿಗೂ ಶೃಂಗೇರಿ ಪೋಲೀಸರು ಮೃತ ಗೋಪಾಲ ರವರಿಗೆ ಅಪಘಾತವಾದ ಅಡ್ಡಗದ್ದೆಯ ಟಾರ್ ಎನ್.ಹೆಚ್.169 ರಸ್ತೆಯ ಬಳಿ ಪಂಚನಾಮೆ ದಾಖಲಿಸಲು ಪಂಚ ಸಾಕ್ಷಿದಾರರಾಗುವಂತೆ ನನಗೆ ಮತ್ತು ಚಾಸಾ-11 ರವರಿಗೆ ತಿಳಿಸಿದರು. ಅದರಂತೆ ಸದರಿ ಸ್ಥಳದಲ್ಲಿ ನಾನು ಮತ್ತು ಚಾಸಾ-11 ರವರು ಹಾಜರಿದ್ದಾಗ ಚಾಸಾ-1 ರವರು ಅಪಘಾತವಾದ ಸ್ಥಳವನ್ನು ನಮ್ಮ ಸಮಕ್ಷಮ ಪೋಲೀಸರಿಗೆ ತೋರಿಸಿದರು. ಪೋಲೀಸರು ಸದರಿ ಅಪಘಾತವಾದ ಸ್ಥಳದ ಪಂಚನಾಮೆಯನ್ನು ಅದೇ ದಿನ ಅದೇ ಸ್ಥಳದಲ್ಲಿ ಮಧ್ಯಾಹ್ನ 1.45 ರಿಂದ 2.45 ಗಂಟೆ ವರೆಗೂ ದಾಖಲಿಸಿಕೊಂಡರು. ನಾನು ಸದರಿ ಸಮಯದಲ್ಲಿ ಸ್ಥಳ ಪಂಚನಾಮೆಗೆ ಸಹಿ ಮಾಡಿದ್ದೇನೆ.

ಸದರಿ ಸ್ಥಳ ಪಂಚನಾಮೆ ಈಗಾಗಲೇ ನಿಪಿ-2 ಎಂದು ನಿಶಾನೆಗೊಂಡಿರುತ್ತದೆ. ಅದರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಅದೇ ಸಂದರ್ಭದಲ್ಲಿ ಪೋಲೀಸರು ಸ್ಥಳದಲ್ಲಿ ತೆಗೆದುಕೊಂಡ 2 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ನಿಶಾನೆಗೊಂಡಿರುತ್ತವೆ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::**

ನನ್ನ ಮನೆ ಸದರಿ ನಿಪಿ-2 ರಲ್ಲಿ ನಮೂದು ಮಾಡಿರುವ ಸ್ಥಳದಿಂದ 10 ಕಿ.ಮೀ ದೂರದಲ್ಲಿದೆ. ಚಾಸಾ-1 ರವರು ನನಗೆ ಪರಿಚಯಸ್ಥರು ಹಾಗೂ ಅವರು ನಮ್ಮ ಮನೆಯ ಬಳಿಯೇ ಖಾಯಂ ವಿಳಾಸದ ವಾಸಿಯಾಗಿದ್ದಾರೆ. ಚಾಸಾ-1 ರವರು ಹೇಳಿದ್ದರಿಂದ ನಾನು ಮತ್ತು ಚಾಸಾ-11 ರವರು ಸದರಿ ದಿನದಂದು ನಿಪಿ-2 ರಲ್ಲಿ ನಮೂದಿಸಿರುವ ಸ್ಥಳಕ್ಕೆ ಹೋಗಿದ್ದೆವು. ನಿಪಿ-2 ರಲ್ಲಿ ನಮೂದಿಸಿದ ಅಪಘಾತ ಸ್ಥಳದ ಪಕ್ಕದಲ್ಲಿ ಬಸ್ ನಿಲ್ದಾಣ ಇದೆ ಎಂದರೆ ಸರಿ. ಸದರಿ ಬಸ್ ನಿಲ್ದಾಣದಲ್ಲಿ ಪ್ರತಿಯೊಂದು ಬಸ್ ಗಳು ನಿಲುಗಡೆ ಮಾಡುತ್ತದೆ ಎಂದರೆ ಸರಿ. ಸದರಿ ಸ್ಥಳದಲ್ಲಿ ಏನು ಘಟನೆ ನಡೆದಿತ್ತು ಎಂಬ ವಿಚಾರ ನನಗೆ ಮೊದಲೇ ತಿಳಿದಿತ್ತು. ಸದರಿ ಸ್ಥಳದಲ್ಲಿ ಏನು ಘಟನೆ ನಡೆದಿತ್ತು ಎಂಬ ವಿಚಾರವನ್ನು ನನಗೆ ದಿ:16-11-2024 ರಂದು ಸುಮಾರು ಬೆಳಗ್ಗೆ 9.00 ಗಂಟೆಗೆ ಚಾಸಾ-1 ರವರು ದೂರವಾಣಿಯ ಮುಖಾಂತರ ಮೊದಲು ತಿಳಿಸಿ ನಂತರ ನಮ್ಮ ಕಛೇರಿಗೆ ಬಂದು ವಿಚಾರ ತಿಳಿಸಿದರು. ನನ್ನನ್ನು ಮತ್ತು ಚಾಸಾ-11 ರವರನ್ನು ಸ್ಥಳಕ್ಕೆ ಆಗಮಿಸಲು ಚಾಸಾ-1 ರವರು ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ತಿಳಿಸಿದರು. ಚಾಸಾ-1 ರವರು ಹೇಳಿದ್ದರಿಂದ ನಮಗೆ ಸದರಿ ಘಟನೆಯ ವಿಚಾರ ನಮಗೆ ಸದರಿ ಸ್ಥಳಕ್ಕೆ ಹೋಗುವ ಪೂರ್ವದಲ್ಲಿಯೇ ತಿಳಿಯಿತು ಎಂದರೆ ಸರಿ.

2. ಚಾಸಾ-1 ರವರು ಅಪಘಾತವಾದ ಸಂದರ್ಭದಲ್ಲಿ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ ಮತ್ತು ಅವರು ಬೆಂಗಳೂರಿನಲ್ಲಿ ಆ ಸಂದರ್ಭದಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ಹೇಳಿದ್ದರಿಂದ ನಾನು ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಚಾಸಾ-1 ರವರು ಹೇಳಿದ್ದರಿಂದ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.